ಅಷ್ಟರಲ್ಲಿ ಕಲಿಯು ತನ್ನ ರಾಜ್ಯವನ್ನು ಪ್ರವೇಶಿಸಿದನೆಂದು ಪರೀಕ್ಷಿತನಿಗೆ ತಿಳಿಯಿತು. ಚತುರಂಗ ಸೈನ್ಯವನ್ನು ತೆಗದುಕೊಂಡು ಕಲಿಯನ್ನು ನಿಗ್ರಹಿಸಲು ಹೊರಟನು. ಹಾದಿಯಲ್ಲಿ ಅನೇಕ ರಾಜ್ಯಗಳನ್ನು ಗೆದ್ದನು. ಸೋತರಾಜರನ್ನು ಕೀಳಾಗಿ ನೋಡದೆ ಅವರೊಂದಿಗೆ ಸ್ನೇಹಪರವಾಗಿ ವರ್ತಿಸಿದನು. ಪರೀಕ್ಷಿತ ರಾಜನ ಸ್ನೇಹಪರತೆಗೆ ಮಾರುಹೋದ ರಾಜರು ಅವನ ರಾಜ್ಯದಲ್ಲೇ ಮಾಂಡಲಿಕರಾಗಿ ಮುಂದುವರೆದರು.

ದಿಗ್ವಿಜಯವು ಸಾಗುವ ಹಾದಿಯಲ್ಲಿ ಒಂಟಿಕಾಲಿನ ಒಂದು ಹಸುವನ್ನು ಕೊಳಕುವೇಷದಲ್ಲಿದ್ದ ಒಬ್ಬನು ಹಿಂಸಿಸುತ್ತಿದ್ದನು. ಆ ದೃಶ್ಯವನ್ನು ಕಂಡ ಪರೀಕ್ಷಿತರಾಜನು ಇವನೇ ಕಲಿಯೆಂದು ನಿರ್ಧರಿಸಿದನು. ಅವನ ನಿಗ್ರಹಕ್ಕೆ ಸಿದ್ಧನಾದನು. ಪರೀಕ್ಷಿತ ರಾಜನನ್ನು ಕಂಡ ಕಲಿಯು ಗಡಗಡ ನಡುಗಿದನು. ಶರಣಾಗತ ನಾಗಿ ಪ್ರಾಣಭಿಕ್ಷೆ ಬೇಡಿದನು. ಕೂಡಲೇ ತನ್ನ ರಾಜ್ಯವನ್ನು ಬಿಟ್ಟು ಹೊರಡೆಂದು ರಾಜನು ಆಜ್ಞೆ ಮಾಡಿದನು. “ಈ ಭೂಮಂಡಲವೇ ನಿನ್ನ ಅಧೀನದಲ್ಲಿರುವಾಗ ನಾನು ಎಲ್ಲಿಗೆ ತಾನೇ ಹೋಗಲಿ, ರಾಜನ್?” ಎಂದ ಕಲಿಯು ಪ್ರಶ್ನಿಸಿದನು. ಆಗ ಪರೀಕ್ಷಿತನು, “ನೀನು ಮದ್ಯಪಾನ, ಜೂಜು, ಪರಸ್ತ್ರೀಸಂಗ ಮತ್ತು ಪ್ರಾಣಿಹಿಂಸೆ ನಡೆಯುವಲ್ಲಿ ನೆಲೆಸು” ಎಂದನು. ಇದರ ಜೊತೆಯಲ್ಲಿ, “ಬಂಗಾರ, ಸುಳ್ಳು, ಮದ, ಕಾಮ, ಕ್ರೋಧ – ಇವುಗಳಲ್ಲಿಯೂ ನಿವಾಸ ಮಾಡು” ಎಂದನು. ಕಲಿಯು ಪರೀಕ್ಷಿತನಿಗೆ ನಮಸ್ಕರಿಸಿ ಹೊರಟುಹೋದನು.

ಶರತ್ಕಾಲದಲ್ಲಿ ರಾಜರು ಅರಣ್ಯಕ್ಕೆ ಹೋಗಿ ದುಷ್ಟಮೃಗಗಳನ್ನು ಬೇಟೆಯಾಡುವುದು ಪರಂಪರೆ. ಅದರಂತೆ ಪರೀಕ್ಷಿತ ರಾಜನೂ ಒಂದು ದಿನ ಬೇಟೆಗಾಗಿ ಅರಣ್ಯಕ್ಕೆ ಹೋದನು. ಬೇಟೆಯ ದಣಿವಿನಿಂದ ಬಳಲಿದನು. ಹತ್ತಿರದಲ್ಲಿ ಕಂಡ ಶಮೀಕ ಋಷಿಯ ಆಶ್ರಮಕ್ಕೆ ಬಂದನು. ಅಲ್ಲಿ ನೀರನ್ನು ಕೇಳಿದನು. ಯಾರಿಂದಲೂ ಉತ್ತರ ಬರಲಿಲ್ಲ. ಹೊರಗೆ ಮರದ ಕಟ್ಟೆಯ ಮೇಲೆ ಋಷಿಗಳು ಧ್ಯಾನಾಸಕ್ತರಾಗಿ ಕುಳಿತಿದ್ದರು. ಅವರು ಕೂಡ ರಾಜನ ಬೇಡಿಕೆಗೆ ಸ್ಪಂದಿಸಲಿಲ್ಲ. ಕೋಪಗೊಂಡ ರಾಜನು, ಅಲ್ಲಿಯೇ ಸತ್ತುಬಿದ್ದಿದ್ದ ಹಾವನ್ನು ಋಷಿಯ ಕೊರಳಿಗೆ ಹಾಕಿ ಹೊರಟುಹೋದನು.

ಆಶ್ರಮದಲ್ಲಿದ್ದ ಹುಡುಗನೊಬ್ಬನು ಋಷಿಯ ಪುತ್ರನಾದ ಶೃಂಗಿಗೆ ನಡೆದ ವಿಷಯವನ್ನು ತಿಳಿಸಿದನು. ಶೃಂಗಿಗೆ ಆಗ ಇನ್ನೂ ಎಳೆಯ ಪ್ರಾಯ. ಆದರೂ ಆತನು ಗಾಯತ್ರಿ ಮಂತ್ರದ ಉಚ್ಚಾರಣೆಯಿಂದ ಸಿದ್ಧಿ ಹೊಂದಿದ್ದನು. ಆ ಮೂಲಕ ವಿಶೇಷ ಶಕ್ತಿಯನ್ನು ಪಡೆದಿದ್ದನು. ತಂದೆಗೆ ಆದ ಅಪ ಮಾನವನ್ನು ಅವನಿಗೆ ಸಹಿಸಲಾಗಲಿಲ್ಲ. ಗಾಯತ್ರಿ ಮಂತ್ರ ಪಠಿಸಿ ಸೂರ್ಯನಿಗೆ ತರ್ಪಣ ಕೊಟ್ಟು, “ನನ್ನ ತಂದೆಯ ಕೊರಳಲ್ಲಿ ಸತ್ತ ಹಾವನ್ನು ಹಾಕಿದವನು ಇನ್ನು ಏಳು ದಿನಗಳಲ್ಲಿ ತಕ್ಷಕನೆಂಬ ಸರ್ಪವು ಕಚ್ಚಿ ಸಾಯಲಿ” ಎಂದು ಶಾಪವನ್ನು ಕೊಟ್ಟನು. ತಂದೆಯಾದ ಶಮೀಕ ಋಷಿಗಳಿಗೆ ವಿಷಯ ತಿಳಿಯಿತು. ಅವರು ಮಗನಿಗೆ ಬುದ್ಧಿಹೇಳಿ ಅವನಿಗೆ ತನ್ನ ತಪ್ಪನ್ನು ಮನಗಾಣಿಸಿದರು.



ತಮ್ಮ ಪುತ್ರನನ್ನು ಕ್ಷಮಿಸಬೇಕೆಂದು ಪರಮಾತ್ಮನಲ್ಲಿ ಪ್ರಾರ್ಥನೆ ಮಾಡಿದರು. ನಂತರ ಪರೀಕ್ಷಿತ ರಾಜನಿಗೆ ಈ ಶಾಪದ ಸುದ್ದಿ ಯನ್ನು ಮುಟ್ಟಿಸಿದರು.

ಅರಮನೆಗೆ ಬಂದ ಪರೀಕ್ಷಿತ ರಾಜನಿಗೆ ತಾನು ಶಮೀಕ ಋಷಿಗಳಿಗೆ ಅಪಮಾನ ಮಾಡಿದೆನೆಂದು ಮನಸ್ಸಿಗೆ ತುಂಬ ಕಸಿವಿಸಿಯಾಗಿತ್ತು. ಇದಕ್ಕೆ ಏನಾದರೂ ಪ್ರಾಯಶ್ಚಿತ್ತ ಆಗಲೇ ಬೇಕೆಂದು ಮನಸ್ಸಿನಲ್ಲಿ ಚಿಂತಿಸುತ್ತಿದ್ದನು. ಅಷ್ಟರಲ್ಲಿ ಶಾಪದ ಸುದ್ದಿಯು ತಿಳಿಯಿತು. ಪರೀಕ್ಷಿತ ರಾಜನಿಗೆ ಕೋಪದ ಬದಲು ಸಂತಸವೇ ಆಯಿತು. ಏಳು ದಿವಸಗಳ ಕಾಲ ಜೀವಿತಕಾಲ ಸಿಕ್ಕಿದ್ದಕ್ಕೆ ಹರ್ಷಗೊಂಡನು. ಅಷ್ಟರೊಳಗೆ ಮುಕ್ತಿಗಾಗಿ ಏನಾದರೂ ಸಾಧನೆ ಮಾಡಿಕೊಳ್ಳಬೇಕೆಂದು ತೀರ್ಮಾನಿಸಿದನು. ಹಿರಿಯ ಮಗನಾದ ಜನಮೇಜಯನಿಗೆ ಪಟ್ಟ ಕಟ್ಟಿದನು. ತಾನು ಗಂಗಾನದೀ ತೀರಕ್ಕೆ ಬಂದನು. ಅಲ್ಲಿ ನೆರೆದಿದ್ದ ಋಷಿಮುನಿಗಳಿಗೆ ಸತ್ಕರಿಸಿ ಮುಕ್ತಿಮಾರ್ಗದ ದಾರಿ ತೋರಿಸಬೇಕೆಂದು ವಿನಂತಿಸಿದನು. ಅಷ್ಟರಹೊತ್ತಿಗೆ, ಶುಕಾಚಾರ್ಯರು ಪರೀಕ್ಷಿತನಿಗೆ ಭಾಗವತ ಬೋಧನೆ ಮಾಡಲು ಅಲ್ಲಿಗೇ ಬಂದರು.

ಶುಕಾಚಾರ್ಯರನ್ನು ಪರೀಕ್ಷಿತನು ಹೀಗೆ ಪ್ರಶ್ನಿಸಿದನು: “ಮರಣಶಯ್ಯೆಯಲ್ಲಿ ಮಲಗಿರುವ ವ್ಯಕ್ತಿಯು ಮುಕ್ತಿಯನ್ನು ಹೊಂದಬೇಕಾದರೆ ಏನನ್ನು ಶ್ರವಣ ಮಾಡಬೇಕು? ಯಾವ ಸಾಧನೆ ಮಾಡಬೇಕು?” ( *ಮುಂದಿನ ಸ್ಕಂಧಗಳ ಕಥೆ, ಬರುವ ಸಂಚಿಕೆಯಲ್ಲಿ* )